ವಿವಾಹವೆಂದರೆ, ಪತಿಗೆ ಸಂಬಂಧಿಸಿದ್ದು ಪತ್ನಿಗೆ ಸೇರುತ್ತದೆ; ಪತ್ನಿಗೆ ಸಂಬಂಧಿಸಿದ್ದು ಪತಿಗೆ ಸೇರುತ್ತದೆ ಎಂದು ನಾನು ತಿಳಿದಿದ್ದೆ. ಆದರೆ ಎಲ್ಲವೂ ಮಾರ್ಕೋಗೆ ಸೇರಿದೆ ಎಂದು ಅನ್ನಿಸುತ್ತಿತ್ತು.

ನಾನು ಅಬಲೆ, ಆಶ್ರಿತೆ ಮತ್ತು ಅವನ ಕೃಪಾದೃಷ್ಟಿಯಲ್ಲಿರುವ ಹೆಣ್ಣಾಗಿದ್ದೆ, ಅವನ ಹೆಂಡತಿಯಾಗಿದ್ದೆ. ಈ ಎಲ್ಲಾ ಸಂಗತಿಗಳೂ ನನ್ನನ್ನು ಹೀನತೆಯ ಅಂಚಿಗೆ ತಳ್ಳುತ್ತಿದ್ದವು.

'ನಾನು ನಿಮ್ಮನ್ನು ಭೇಟಿಯಾದಾಗ, ಒಳ್ಳೆಯ ನೌಕರಿಯಲ್ಲಿದ್ದೆ, ಆರ್ಥಿಕವಾಗಿ ಆತ್ಮನಿರ್ಭರಳಾಗಿದ್ದೆ, ನಿಮಗಾಗಿ, ನಿಮ್ಮಿಂದಾಗಿ, ಪರಿವಾರಕ್ಕೋಸ್ಕರ ನನ್ನ ನೌಕರಿಗೆ ಒದ್ದು, ನಿಮ್ಮೊಂದಿಗೆ ಅಮೆರಿಕ, ಇಂಡಿಯಾ ಮತ್ತೆ ಡೆನ್ಮಾರ್ಕ್‌ಗೆ ಬಂದಿದ್ದೇನೆ. ಈ ವಯಸ್ಸಿನಲ್ಲಿ ನೌಕರಿ ಸಿಗುವುದು ಸುಲಭವಲ್ಲ. ನನ್ನಲ್ಲಿ ಯೋಗ್ಯತೆಯಿದೆ. ನೀವು ಒಂದು ವೇಳೆ ನನಗೆ ಸಹಾಯ ಮಾಡಿದರೆ, ನಾನು ಮತ್ತೆ ಚೇತರಿಸಿಕೊಳ್ಳಬಲ್ಲೆ' ಎಂದು ಹೇಳುತ್ತಿದ್ದೆ.

ಸರಿ, ನಾನು ಒಮ್ಮೆಲೆ ಸ್ವಲ್ಪ ಹಣವನ್ನು ಸಂಪಾದಿಸಲು ಕಾತರಳಾದೆ. ನೌಕರಿಗಾಗಿ ಜಾಹೀರಾತುಗಳನ್ನು ನೋಡಲಾರಂಭಿಸಿದೆ. ಅದೊಂದು ದಿನ ನೋಡಿದ ಜಾಹೀರಾತು ಆಶ್ಚರ್ಯಕರವಾಗಿತ್ತು:

'ಪ್ರೊಫೆಷನಲ್ ಮಸಾಜ್ ಥೆರಪಿಸ್ಟ್ ಬೇಕಾಗಿದ್ದಾರೆ.'

ನಾನು ಅವರಿಗೆ ತಕ್ಷಣ ಫೋನ್ ಮಾಡಿದೆ. ಮ್ಯಾನೇಜರ್ ಅಚಾರಾ, ಫೋನ್‌ನಲ್ಲಿ ಮಾತನಾಡುವಾಗ ನಮ್ರ ಮತ್ತು ಸ್ನೇಹದ ಮಹಿಳೆಯೆಂದು ಕಂಡಿತು. ಅವರು, ನಾನು ಥಾಯ್ಲೆಂಡ್ ಮೂಲದವಳು, ಕೋಪನ್‌ಹೇಗನ್ನಿನಲ್ಲಿ ಥಾಯ್ ಮಸಾಜ್ ಪಾರ್ಲರ್ ನಡೆಸುತ್ತಿದ್ದೇನೆ ಎಂದರು. ಅವರು ಮರುದಿನ ತಮ್ಮ ಪಾರ್ಲರ್‌ನಲ್ಲಿ ನನ್ನನ್ನು ಸಂದರ್ಶನಕ್ಕೆ ಬರುವಂತೆ ಆಹ್ವಾನಿಸಿದಾಗ ನಾನು ರೋಮಾಂಚನಗೊಂಡೆ. ನಾನು ಕೀನ್ಯಾದಲ್ಲಿದ್ದಾಗ ಮೌರೀನ್‌ರಿಂದ ಆಯಿಲ್ ಮಸಾಜ್ ತರಬೇತಿಯನ್ನು ಪಡೆದಿದ್ದೆ. ನಂತರ ಬೆಂಗಳೂರಿನ ಪ್ರತಿಷ್ಠಿತ ಕೇಂದ್ರವೊಂದರಿಂದ ಪ್ರೊಫೆಷನಲ್ ಮಸಾಜ್ ಕೋರ್ಸ್ ಸರ್ಟಿಫಿಕೇಟ್ ಪಡೆದಿದ್ದೆ, ಆಯಿಲ್ ಮಸಾಜ್‌ನೊಂದಿಗೆ ಅಕ್ಯೂಪ್ರೆಶರ್ ತರಬೇತಿಯನ್ನು ಸಹ ಪಡೆದಿದ್ದೆ. ನನ್ನಲ್ಲಿ ಕೆಲವು ಕೌಶಲಗಳಿದ್ದವು. ನಾನು ಪದೇಪದೇ ನನ್ನ ಬಾಡಿ ಮಸಾಜ್ ಡಿಪ್ಲೊಮೊ ಸರ್ಟಿಫಿಕೇಟನ್ನು ನೋಡುತ್ತಿದ್ದೆ. ಅದು ನನಗೆ ಬೆಂಗಳೂರಿನ ಅಭ್ಯಂಗಾ ಆಯುರ್ವೇದಿಕ್ ಆಯಿಲ್ ಮಸಾಜ್ ಕೇಂದ್ರದಿಂದ ಲಭಿಸಿತ್ತು. ದೇಹವೊಂದಕ್ಕೆ ಮಸಾಜ್ ಮಾಡಲು ನನ್ನ ಕೈಗಳು ಕಾತರಗೊಂಡಿದ್ದವು.

ಸಂದರ್ಶನ ಉತ್ತಮವಾಗಿತ್ತು, ನನ್ನನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಯಿತು. ವ್ಯಾಪಾರ ಮಂದವಾಗಿತ್ತು. ನಾನು ವಾರದಲ್ಲಿ ಎರಡು ಮೂರು ದಿನಗಳಷ್ಟೇ ಪಾರ್ಲರ್‌ಗೆ ಹೋಗಬೇಕಿತ್ತು; ಪ್ರತಿ ವಾರ 4–8 ಗ್ರಾಹಕರಿಗೆ ಮಸಾಜ್ ಮಾಡಬೇಕಾಗುತ್ತಿತ್ತು. ಸೆಲೂನ್ ಮಾಲೀಕರಾದ ಅಚಾರಾರಿಗೆ ಪ್ರತಿ ಗ್ರಾಹಕರಿಂದ ಸಿಗುವ ಶುಲ್ಕದಲ್ಲಿ ನನಗೆ ಶೇ.20 ಕೊಡುತ್ತಿದ್ದರು. ನನ್ನ ಕೈಗೆ ಬಹು ಕಷ್ಟದಿಂದ ತಿಂಗಳಿಗೆ ಒಂದು ಸಾವಿರ ಕ್ರೋನರ್ ಬರುತ್ತಿತ್ತು, ಆದರೂ ನಾನು ಈ ಕೆಲಸವನ್ನು ಮುಂದುವರೆಸಿದೆ, ಏಕೆಂದರೆ ಅದು ನನಗೆ ಉದ್ಯೋಗದ ಅನುಭವವನ್ನು ನೀಡುತ್ತಿತ್ತು.

ಅಚಾರಾ ಹೆಚ್ಚು ಶಿಕ್ಷಣವನ್ನು ಪಡೆದಿರಲಿಲ್ಲ. ಅವರಲ್ಲಿ ಪ್ರೊಫೆಷನಲ್ ಕೌಶಲ ಮತ್ತು ಶಿಷ್ಟಾಚಾರದ ಅಭಾವವೂ ಇತ್ತು. ಒಮ್ಮೆ ಗ್ರಾಹಕನೊಬ್ಬ ಅವರನ್ನು ನನ್ನೆದುರೇ ಬಲವಾಗಿ ತಬ್ಬಿಕೊಂಡ! ಆಗ ಅವರು ನಗುತ್ತಾ ಹೇಳಿದರು, 'ಇವರು ನಿನ್ನ ಮಸಾಜ್‌ನಿಂದ ತುಂಬಾ ಸಂತೋಷಗೊಂಡಿದ್ದಾರೆ. ಈ ಮೂಲಕ ನಿಮಗೆ ಧನ್ಯವಾದಗಳನ್ನು ಹೇಳುತ್ತಿದ್ದಾರೆ. ಈ ಅಭ್ಯಾಸವನ್ನು ರೂಢಿಸಿಕೊಳ್ಳಿ.'

ನಾನು ಸಿಟ್ಟಿನಿಂದ ಹೇಳಿದೆ, 'ಅವನು ಹದ್ದು ಮೀರಿದ್ದಾನೆ.'

'ನೀವು ಓವರ್ ರಿಯಾಕ್ಟ್ ಮಾಡುತ್ತಿದ್ದೀರಿ. ಅವನು ಪುರುಷ ಅಂತ ಹೀಗೆ ಮಾಡುತ್ತಿದ್ದೀರಿ; ಒಂದು ವೇಳೆ ಅವನು ಒಂದು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರೆ, ಅವನಲ್ಲಿ ಲೈಂಗಿಕ ದುರಾಗ್ರಹವಿದೆ ಎಂದು ಇದರರ್ಥವಲ್ಲ.'

ಅಚಾರಾಳಂಥ ಕಡಿಮೆ ಕೌಶಲದ ಮಹಿಳೆಯ ಅಧೀನದಲ್ಲಿ ನಾನು ಕೆಲಸ ಮಾಡಬೇಕಿದೆ ಎಂದು ನನಗೆ ತುಂಬಾ ವಿಷಾದವಾಗುತ್ತಿತ್ತು. ಅವಳ ಆದೇಶಗಳನ್ನು ಪಾಲಿಸಬೇಕಿದೆ. ನಾನು ಮಾರ್ಕೋನಲ್ಲಿ ನನ್ನ ಅಸಹಾಯಕತೆಯನ್ನು ಹೇಳಿದಾಗ ಅವನು ವ್ಯಂಗ್ಯದಿಂದ ಹೇಳುತ್ತಿದ್ದ, 'ಕರಿಯರ್ ದೃಷ್ಟಿಯಿಂದ ನೋಡುವುದಾದರೆ ಮಸಾಜ್ ಮಾಡುವ ಕೆಲಸವೇ ತಪ್ಪು ಆಯ್ಕೆಯಾಗಿದೆ. ಈ ಉದ್ಯೋಗದಿಂದ ನೀನು ಒಳ್ಳೆಯ ಸಂಪಾದನೆಯನ್ನಂತೂ ಮಾಡಲಾರೆ, ಅದರೊಂದಿಗೆ ನೀನು ಅವಮಾನವನ್ನೂ ಎದುರಿಸಬೇಕಾಗುತ್ತದೆ. ಈ ಉದ್ಯೋಗದಿಂದ ಆದಷ್ಟು ಬೇಗ ಹೊರಗೆ ಬಾ.'

'ಮಸಾಜ್ ಒಂದು ಪುರಾತನ ಚಿಕಿತ್ಸಾ ಪದ್ಧತಿಯಾಗಿದ್ದು, ಮಸಾಜ್ ಸೆಲೂನ್‌ಗಳು ಈಗ ಅನಿವಾರ್ಯವಾಗಿವೆ. ಆದರೆ ಮಸಾಜ್ ಥೆರಪಿಸ್ಟ್‌ಗಳು ತರಬೇತಿಯನ್ನು ಹೊಂದಿರಬೇಕು' ಎಂದೆ ನಾನು.

ನಾನು ಮತ್ತೊಮ್ಮೆ ಮಾರ್ಕೋಗೆ, ನಾವಿಬ್ಬರು ಮುಂದುವರೆಯಲು ಸಹಕಾರದ ಅವಶ್ಯಕತೆಯಿದೆ ಎಂದು ತಿಳಿ ಹೇಳಲು ಪ್ರಯತ್ನಿಸಿದೆ.

'ನಾವು ಪತಿಪತ್ನಿಯರಾಗಿದ್ದು, ಜೀವನ ಸಂಗಾತಿಗಳಾಗಿದ್ದೇವೆ, ನೀವು ನನಗೆ ಆರ್ಥಿಕವಾಗಿ ಸಹಾಯ ಮಾಡಿದರೆ, ನನ್ನ ಸ್ವಂತದ ಮಸಾಜ್ ಸೆಲೂನ್ ತೆರೆಯಬಲ್ಲೆ, ಆಗ ಅಲ್ಲಿಗೆ ನಾನೇ ಬಾಸ್ ಆಗುತ್ತೇನೆ. ಡೆನ್ಮಾರ್ಕ್‌ನಲ್ಲಿ ಒಂದು ಆಯುರ್ವೇದಿಕ್ ಮಸಾಜ್ ಸೆಲೂನ್ ಇಲ್ಲ. ನನ್ನ ಸೆಲೂನ್‌ನಿಂದ ಒಳ್ಳೆಯ ಸಂಪಾದನೆಯಾಗುತ್ತದೆ, ಏಕೆಂದರೆ ಆಯುರ್ವೇದ ಜಗತ್ತಿನ್ನೆಲ್ಲೆಡೆ ಜನಪ್ರಿಯತೆಯನ್ನು ಗಳಿಸುತ್ತಿದೆ. ಜನ ಮರಳಿ ಪ್ರಕೃತಿಯೆಡೆಗೆ ಮುಂದುವರೆಯುತ್ತಿದ್ದಾರೆ. ಜನ ತಮ್ಮ ಶರೀರದ ವಿಜ್ಞಾನವನ್ನು ತಿಳಿದಿಲ್ಲ, ಇದು ಕೆಲಸ ಮಾಡುವ ವಿಧಾನವನ್ನು ನಾವು ಹೇಳಿದರೆ, ಆಗ ಜನ ನಂಬಲು ಆರಂಭಿಸುತ್ತಾರೆ. ಅವರು ಆಗ ಮಸಾಜ್ ಮಾಡಿಸಿಕೊಳ್ಳುತ್ತಾರೆ, ಅಲ್ಲದೆ ನಾವು ಸಲಹೆಯಿತ್ತ ಹರ್ಬಲ್ ಉತ್ಪಾದನೆಗಳನ್ನು ಸಹ ಖರೀದಿಸುತ್ತಾರೆ.'

'ಹೂಂ... ಆಯುರ್ವೇದಿಕ್ ಮಸಾಜ್ ಪಾರ್ಲರ್... ಹರ್ಬಲ್ ಪ್ರಾಡಕ್ಸ್... ಕನ್ನಡಿಯಲ್ಲಿ ನಿನ್ನ ಮುಖ ನೋಡಿಕೊಂಡಿದ್ದೀಯ...?'

ಮಾರ್ಕೋ ಮುಖ ಸೊಟ್ಟಗೆ ಮಾಡಿಕೊಂಡು ಹೇಳಿದ.

ಮಾರ್ಕೋ ನನಗೆ ಈ ಹಿಂದಿನ ಇಬ್ಬರು ಪತಿಯರಿಗಿಂತ ಹೆಚ್ಚು ಅಪಾಯದ ವ್ಯಕ್ತಿಯೆಂದು ತೋರುತ್ತಿದ್ದ. ನನ್ನ ಮಾಜಿ ಪತಿ ಅಬ್ರಾಹಮ್ ಮತ್ತು ಲಾರ್ಸ್ ಏನಾದರೂ ಮಾಡಿರಲಿ, ನನ್ನ ಮನಸ್ಸಿಗೆ ದುಃಖವನ್ನುಂಟು ಮಾಡಿರಲಿ, ನನಗೆ ಹೊಡೆದು ಬಡಿದಿರಲಿ, ಆದರೆ ಅವರು ನನ್ನ ಅಸ್ತಿತ್ವಕ್ಕೆ ಆಘಾತವೆಸಗಲಿಲ್ಲ. ಅಬ್ರಾಹಮ್ ನನ್ನ ಬಗ್ಗೆ ನಿಷ್ಠಾವಂತನಾಗಿರಲಿಲ್ಲ, ಆದರೆ ಅವನು ನನ್ನ ಏಳಿಗೆಯಲ್ಲಿ ತುಂಬಾ ಸಹಕರಿಸಿದ. ಸಮುದ್ರದಲ್ಲಿ ಈಜನ್ನು ಕಲಿಯಲು ನನಗೊಬ್ಬ ತರಬೇತುದಾರರನ್ನು ವ್ಯವಸ್ಥೆ ಮಾಡಿದ್ದ. ನನ್ನ ಕಂಪ್ಯೂಟರ್ ಕೋರ್ಸ್‌ಗೆ ದುಬಾರಿ ಶುಲ್ಕವನ್ನು ಭರಿಸಿದ್ದ. ಮೊಂಬ್ಬಾಸಾದಲ್ಲಿ ನಾನು ಅಧ್ಯಾಪಕ ವೃತ್ತಿಗೆ ಸೇರಲು ಅನೇಕರಿಂದ ಶಿಫಾರಸ್ಸು ಮಾಡಿಸಿದ್ದ... ಲಾರ್ಸ್ ನನಗೆ ಹೊಡೆದರೂ, ಹಣಕ್ಕಾಗಿ ಎಂದೂ ಸತಾಯಿಸಲಿಲ್ಲ. ಅವನ ಬಿಜಿನೆಸ್ ಹೆಚ್ಚಾದಾಗ, ನನಗೆ ತಾನು ಸಂಪಾದಿಸಿದ ಹಣವನ್ನು ಅರ್ಪಿಸುತ್ತಿದ್ದ. ಅವನ ಎರಡೆರಡು ಎಟಿಎಮ್ ಕಾರ್ಡ್‌ಗಳು ನನ್ನ ಬಳಿ ಇರುತ್ತಿದ್ದವು, ಅವುಗಳಿಂದ ನಾನು ಬೇಕಾದಾಗ ಹಣವನ್ನು ತೆಗೆದುಕೊಳ್ಳುತ್ತಿದ್ದೆ.

'ನಾನು ನಿನಗೆ ಬಿಡಿಕಾಸನ್ನೂ ಕೊಡಲ್ಲ' ಮಾರ್ಕೋ ಹಲ್ಲು ಕಡಿಯುತ್ತಾ ಹೇಳುತ್ತಿದ್ದ.

'ಮಾರ್ಕೋ, ನೀವೇಕೆ ನನ್ನ ಬಗ್ಗೆ ಇಷ್ಟು ವಿರೋಧಿಯಾಗಿದ್ದೀರಿ? ನಾನು ನಿಮ್ಮ ಮಗನ ತಾಯಿ!'

'ಅದೊಂದು ಅತಿ ದೊಡ್ಡ ದುರ್ಘಟನೆ'.

***

ನಮ್ಮಿಬ್ಬರ ನಡುವೆ ಗೋಡೆಯೊಂದು ನಿಂತಂತಾಗಿತ್ತು. ಜೊತೆಯಲ್ಲಿದ್ದರೂ, ನಾವು ಬೇರೆಬೇರೆಯಾಗಿದ್ದೆವು. ಮಾರ್ಕೋನ ಪ್ರೀತಿ ಬೇರೆಡೆ ಚಿಗುರುತ್ತಿದೆಯೇ ಎಂಬ ಅನುಮಾನ ಕಾಡಿತು, ಆದರೆ ಇದಕ್ಕೆ ನನ್ನ ಬಳಿ ಪುರಾವೆ ಇರಲಿಲ್ಲ. ಇಂಥ ಪತಿಯನ್ನು ಕಟ್ಟಿಕೊಂಡು ಏನು ಮಾಡಲಿ? ನನಗೆ ಡ್ಯಾನಿಶ್ ದಾರ್ಶನಿಕರಾದ ಸೋರೆನ್ ಕಿರ್ಕೆಗಾರ್ಡ್‌ರ ಹೇಳಿಕೆ ನೆನಪಾಯಿತು:

'ಒಂದು ಕೆಟ್ಟ ವಿವಾಹಕ್ಕಿಂತ ಸಾವು ಲೇಸು.'

ನನ್ನಿಂದ ಎಲ್ಲಿ ತಪ್ಪಾಗಿದೆ? ನಾನು ಅಪರಾಧವೆಸಗದೆ, ಹಿಂಸೆಯನ್ನು ಅನುಭವಿಸಬೇಕಾದ ಪರಿಸ್ಥಿತಿ ಎದುರಾದರೆ ಮನಸ್ಸು ಪದೇಪದೇ ಕರಗಿ, ನನ್ನ ತಪ್ಪೇನಿದೆ ಎಂದು ಕಿರುಚುತ್ತದೆ. ನಾನು ಹೋಗಲು ಬಯಸಿದರೂ ಎಲ್ಲಿಗೆ ಹೋಗುವುದು? ನಾನು ಪ್ರತಿ